# ಪರ್ಯಾಯ ಮೌಲ್ಯಮಾಪನದೊಂದಿಗೆ ಶಾಲೆಗೆ ಹಿಂದಿರುಗಿ

ಕೀರ್ತಿ ಕಪೂರ್

**ಪೀಠಿಕೆ:**

ಈ ಲೇಖನವು ನಾನು ಮೂರು ತಿಂಗಳು ಅಯಾ ನಗರ್, ದೆಹಲಿಯಲ್ಲಿನ ನಿಗಮ್ ಪ್ರತಿಭಾ ಗರ್ಲ್ಸ್ ಶಾಲೆಯಲ್ಲಿ ಪ್ರಶಿಕ್ಷಕಳಾಗಿ ಕಾರ್ಯನಿರ್ವಹಿಸಿದ ನನ್ನ ಅನುಭವಗಳ, ನಾನು ಗಮನಿಸಿದ ವರ್ತನೆಗಳ, ಚಟುವಟಿಕೆಗಳ ದಾಖಲೆಯಾಗಿದೆ.

"ಅದು ವಾಸ್ತವದಲ್ಲಿ ಸಾಧ್ಯವಿಲ್ಲ. ಪ್ರತಿ ವಿದ್ಯಾರ್ಥಿಗೂ ಅವರವರ ತಪ್ಪುಗಳನ್ನು ತೋರಿಸಿಕೊಡುವುದು ಅಸಾಧ್ಯ" ಅವರು ಹೇಳ್ತಾಯಿದ್ದರು.

ಇದು ಸುಮನ್ (ಹೆಸರು ಬದಲಾಯಿಸಲಾಗಿದೆ), ನಾನು ಅವರನ್ನು ಕೇಳಿದ ಪ್ರಶ್ನೆ, 5ನೆ ತರಗತಿ ಮಕ್ಕಳಿಗೆ ಅವರ ಇಂಗ್ಲೀಷ್ ಹೋಂ ವರ್ಕ್ ನಲ್ಲಿನ ಅಥವಾ ಪರೀಕ್ಷೆಯಲ್ಲಿ ಮಾಡಿದ ತಪ್ಪುಗಳನ್ನು ತಿದ್ದಿ ತೋರಿಸಲಾಗಿದೆಯೇ? ಎಂಬುದಕ್ಕೆ ನೀಡಿದ ಉತ್ತರವಾಗಿತ್ತು

"ನನಗೆ ಪ್ರತಿ ವಿದ್ಯಾರ್ಥಿಗೂ ಅವರೆಲ್ಲ ಎಲ್ಲಿ ತಪ್ಪು ಮಾಡಿದ್ದಾರೆ ಎಂದು ಹೇಳಲು ಸಾಧ್ಯವಿಲ್ಲ" ಎಂಬುದು ಅವರ ಪ್ರತಿಕ್ರಿಯೆಯಾಗಿತ್ತು. "ವಿದ್ಯಾರ್ಥಿಗಳ ನೋಟ್ ಬುಕ್ ಅನ್ನು ಪರೀಕ್ಷೆ ಮಾಡುವುದೇ ಒಂದು ದೊಡ್ಡ ಕೆಲಸ. ನಾನು ಅವರ ನೋಟ್ ಬುಕ್ ಹಿಂದಿರುಗಿಸಿದ ಮೇಲೆ ಅವರು ಯಾವುದು ತಪ್ಪು-ಸರಿ ಅಂತ ನೋಡಿಕೊಳ್ಳುತ್ತಾರೆ"[1]

ಸರಿಯಾಗಿ ಇದೇ ಮಾತು ಈ ಹಿಂದೆ ಕೇಳಿದ್ದು ನನಗೆ ನೆನಪಾಯಿತು. ಎನ್ ಸಿ ಇ ಆರ್ ಟಿ ಸೇರುವ ಮೊದಲು ನಾನು ಸುಮಾರು ಹತ್ತು ವರ್ಷಗಳು ಪಾಠ ಮಾಡಿದ್ದ ಅನೇಕ ಶಾಲೆಗಳಲ್ಲಿ- ದೇಶಾದ್ಯಂತ ಪ್ರತಿಷ್ಠಿತ, ಶೋಕಿಯ, ಖಾಸಗಿ ಶಾಲೆಗಳಿಂದ ಹಿಡಿದು, ಹಳ್ಳಿಗಳ ತಾತ್ಕಾಲಿಕ ಗುಡಿಸಲುಗಳ ಶಾಲೆಗಳವರೆಗೆ - ಇಂತಹ ಮಾತುಗಳು ಸಾಮಾನ್ಯವಾಗಿದ್ದವು. ಅದೇನೇ ಇದ್ದರೂ, ಪ್ರಶಿಕ್ಷಕಳಾಗಿ ಅಂತಹ ಅಭಿಪ್ರಾಯಗಳನ್ನು ಪರಿವರ್ತಿಸಿ, ಕಲಿಕೆಯ ಪ್ರಕ್ರಿಯೆಯು ಎಳೆಯ ಮನಸ್ಸುಗಳಿಗೆ ಅವಿಸ್ಮರಣೀಯವಾಗುವಂತೆ ಮಾಡಬೇಕಾದುದು ನನ್ನ ಸವಾಲಾಗಿತ್ತು.

ಸಂಶೋಧನೆಯನ್ನು ಬಳಸಿ ಗೈರುಹಾಜರಿ ಮತ್ತು ಕಲಿಕೆಯ ಸಂದರ್ಭದಲ್ಲಿ ಕಂಡು ಬರುವ ಕೊರತೆಯನ್ನು ಗುರುತಿಸಿ ಸರಳವಾದ ಬೋಧನಾ-ಕಲಿಕಾ ತಂತ್ರಗಳನ್ನು ಪರಿಚಯಿಸುವುದು

ಒಳ್ಳೆಯ ಪ್ರಾರಂಭವಾಗಬಹುದು. ಇದು ಕಲಿಕೆಯ ಅನುಭವವನ್ನು ಯಾವುದೇ ಪ್ರಮುಖ ಬಂಡವಾಳವಿಲ್ಲದೆ ಸುಧಾರಿಸಬಹುದು ಎನಿಸಿತು. ಈ ನನ್ನ ಕ್ಷೇತ್ರ ಸಮೀಕ್ಷೆಯಲ್ಲಿ ಅಂತಹ ಒಂದು ಅವಕಾಶವನ್ನು ಗುರುತಿಸಿದ್ದನ್ನು ಚರ್ಚಿಸುತ್ತೇನೆ. ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಇಬ್ಬರಿಗೂ ಅನುಕೂಲವಾದ ಸ್ವ-ಮೌಲ್ಯಮಾಪನ ಕ್ರಮವನ್ನು ಇಲ್ಲಿ ಪರಿಚಯಿಸುತ್ತೇನೆ.

**ಹೊಸ ತಂತ್ರ ಕೌಶಲಗಳು**

ಒಂದು ದಿನ ನಾನು "ಇವತ್ತು, ನೀವೆಲ್ಲ ನಿಮ್ಮ ಬರವಣಿಗೆಯನ್ನು ನೀವೇ ಪರೀಕ್ಷೆ ಮಾಡಿಕೊಳ್ಳಬೇಕು" ಎಂದು 5ನೆ ತರಗತಿ ಮಕ್ಕಳಿಗೆ ಹೇಳಿದೆ.

ಅವರ ಮುಖದಲ್ಲಿ ಕಂಡುಬಂದ ಸಂಶಯ ನೋಡಿ ಸೋಜಿಗವೆನಿಸಿತು ಮತ್ತು ಅವರು ನಾನು ಹೇಳಿದ್ದನ್ನು ಸರಿಯಾಗಿ ಕೇಳಿಸಿಕೊಂಡರೆ ಎಂದೂ ಚಕಿತಳಾದೆ. ಅವರೆಲ್ಲರ ಮುಖದಲ್ಲಿ ದೊಡ್ಡ ಪ್ರಶ್ನೆ ಎದ್ದು ಕಾಣುತ್ತಿತ್ತು "ಹೇಗೆ?" ಕುತೂಹಲ ತಡೆಯದ ಒಂದು ಹುಡುಗಿಯು ಎಲ್ಲರ ಧ್ವನಿಯಾದಳು,

"ಆದರೆ, ನಮ್ಮ ಬರಹವನ್ನು ನಾವೇ ಹೇಗೆ ಪರೀಕ್ಷಿಸುವುದು?"

ನಾನು ನಸುನಕ್ಕು ಹೇಳಿದೆ, "ನಾವೀಗ ಪಾಠವನ್ನು ಓದಿ ಮುಗಿಸೋಣ, ಆನಂತರ ನಾನು ನಿಮಗೆ ಮೂರು ಪ್ರಶ್ನೆಗಳನ್ನು ಕೊಡುತ್ತೇನೆ. ನೀವು ಇಲ್ಲಿ ಕುಳಿತು ಉತ್ತರ ಬರೆಯಿರಿ. ನೀವು ಉತ್ತರ ಬರೆದ ನಂತರ ನಾನು ಸರಿ ಉತ್ತರ ಹೇಳುತ್ತೇನೆ. ಆಗ ನೀವು ಬರೆದ ಉತ್ತರ ಸರಿಯಾ ತಪ್ಪಾ ಹೇಳಿರಿ."

"ಏನಂತೀರಾ ಇದಕ್ಕೆ?" ನಾನು ಕೇಳಿದೆ.

ವೃತ್ತವೊಂದರ ಭಾಗವನ್ನು ತಮ್ಮ ಗಲ್ಲದಿಂದ ಎಳೆಯುವಂತೆ ಕೆಲವು ಹುಡುಗಿಯರು ಕತ್ತು ಅಲ್ಲಾಡಿಸಿದರು. ಇತರರು ಆಸಕ್ತಿಯಿಂದ ನೋಡುತ್ತಿದ್ದರು. ನನ್ನ ಅನುಭವ ಹೇಳ್ತಾಯಿತ್ತು, ನಾನು ಅವರ ಗಮನ ಸೆಳೆದಿದ್ದೇನೆ ಅಂತ.

ನಾವು ಪಾಠದ ಒಂದು ಭಾಗವನ್ನು ಓದಿದೆವು. ಆನಂತರ ಕೆಲವು ಪ್ರಶ್ನೆಗಳನ್ನು ಕೇಳಿದೆ. ಅವರು ಸರಿಯಾದ ಕಾಲ ಪ್ರತ್ಯಯಗಳನ್ನು ಉಪಯೋಗಿಸಿ ಖಾಲಿಜಾಗ ತುಂಬಿ ವಾಕ್ಯಗಳನ್ನು ಪೂರ್ಣಗೊಳಿಸಬೇಕಿತ್ತು. ಎರಡನೆ ಪ್ರಶ್ನೆಯು, ಅನುಕ್ರಮದಲ್ಲಿಲ್ಲದ ವಾಕ್ಯಗಳನ್ನು ಸರಿಯಾಗಿ ಜೋಡಿಸಿ ಓದಿದ ಪಠ್ಯದ ಸಾರಾಂಶವನ್ನು ಹೇಳುವುದಾಗಿತ್ತು .

ಅವರೆಲ್ಲ ಉತ್ತರ ಬರೆದ ನಂತರ, ನಾನು ಸರಿಯಾದ ಉತ್ತರಗಳನ್ನು ಬೋರ್ಡ್ ಮೇಲೆ ಬರೆದೆ. ಆಮೇಲೆ ಅವರೆಲ್ಲರನ್ನೂ ಅವರು ಬರೆದ ಉತ್ತರಕ್ಕೆ ಹೋಲಿಸಿ ತಪ್ಪುಗಳನ್ನು ಗುರುತಿಸಲು ಹೇಳಿದೆ. ಅದನ್ನನುಸರಿಸಿ ಅವರುಗಳು ಮಾಡಿದ್ದ ತಪ್ಪುಗಳ ಬಗ್ಗೆ ಮತ್ತು ಸರಿಯಾದ ಕಾಲ ಪ್ರತ್ಯಯ

ಬರೆಯುವುದು ಎಷ್ಟು ಮುಖ್ಯ ಎಂದು ಚರ್ಚಿಸಿದೆವು. ಅಲ್ಲಿಂದಾಚೆಗೆ ವಿದ್ಯಾರ್ಥಿಗಳು ಸ್ವತಃ ತಾವೇ ತಮ್ಮ ಬರವಣಿಗೆಯನ್ನು ತಿದ್ದಿದರು ಮತ್ತು ಸಹಪಾಠಿಗಳೊಂದಿಗೆ ನೋಟ್ ಬುಕ್ ಬದಲಾಯಿಸಿಕೊಂಡು ಕಟ್ಟಕಡೆಯದಾಗಿ ಪರಸ್ಪರ ಪರೀಕ್ಷಿಸಿಕೊಂಡರು.

ಚಿತ್ರ 1. ವಿದ್ಯಾರ್ಥಿನಿಯರು ಸ್ವ-ಮೌಲ್ಯಮಾಪನ ಮಾಡಿಕೊಳ್ಳುತ್ತಿರುವುದು
ನಿಗಮ್ ಪ್ರತಿಭಾ ಗರ್ಲ್ಸ್ ಶಾಲೆ, ಅಯಾ ನಗರ್,ದೆಹಲಿ

ಅನೇಕ ವಿದ್ಯಾರ್ಥಿಗಳು ಮೊದಲ ಬಾರಿಗೆ ಕೆಳಕಂಡ ಅಂಶಗಳೊಂದಿಗೆ ಹೊಂದಿಕೊಂಡ ಒಂದು ಪರಿಕಲ್ಪನೆಯ ಕೊಂಡಿಯನ್ನು ಕಾಣುತ್ತಿದ್ದರು:

- ಉತ್ತರ ಬರೆಯಲು ಅವರ ತಯಾರಿ
- ಉತ್ತರ ಬರೆಯುವುದು
- ಅವರು ಬರೆದ ಉತ್ತರವನ್ನು ಶಿಕ್ಷಕರು ಏನು ಮಾಡುತ್ತಾರೆ
- ಅವರು ಬರೆದ ಉತ್ತರಕ್ಕೆ ಶಿಕ್ಷಕರ ಪ್ರತಿಕ್ರಿಯೆ

ಇದಾದ ನಂತರ ವಿದ್ಯಾರ್ಥಿಗಳು ತರಗತಿಯಲ್ಲಿ ಹೆಚ್ಚು ಆಸಕ್ತಿ ಹೊಂದಿದ್ದರು ಎಂಬುದು ಸ್ಪಷ್ಟವಾಗಿತ್ತು.

ವಿದ್ಯಾರ್ಥಿಗಳನ್ನಲ್ಲದೆ ನಾನು, ತರಗತಿಯ ಶಿಕ್ಷಕಿಯನ್ನೂ ಗಮನಿಸುತ್ತಿದ್ದೆ. ಸುಮನ್ ಎಷ್ಟೇ ಪ್ರಯತ್ನಪಟ್ಟರೂ ಆಕೆಯ ಆಶ್ಚರ್ಯವನ್ನು ಮುಚ್ಚಿಟ್ಟುಕೊಳ್ಳಲಾಗಲಿಲ್ಲ. ಆಕೆಗೆ ವಿದ್ಯಾರ್ಥಿಗಳು ಸ್ವತಃ ತಮ್ಮ ಉತ್ತರನ್ನು ತಾವೇ ಪರೀಕ್ಷೆ ಮಾಡಿಕೊಳ್ಳುತ್ತಿರುವುದು ಬಹಳ ಖುಷಿ ಕೊಟ್ಟಿತು. ಇದು ಶಿಕ್ಷಕರು, ಪ್ರಶಿಕ್ಷಕರು ಮತ್ತು ಆಡಳಿತಗಾರರಲ್ಲಿ ಇರಲೇಬೇಕಾದ  ಮೌಲ್ಯಮಾಪನ ಸಾಕ್ಷರತೆಯ ಅವಶ್ಯಕತೆಯ ಬಗೆಗಿನ ನಿರ್ಣಾಯಕ ಗುರುತಾಗಿತ್ತು . ವಾಸ್ತವವಾಗಿ, ಎಲ್ಲಾ ಹಂತದಲ್ಲಿಯೂ ಶಿಕ್ಷಣತಜ್ಞರು, ತಮ್ಮ ಮೌಲ್ಯಮಾಪನವು ಸೂಕ್ತ ರೀತಿಯಲ್ಲಿ ಪ್ರತಿಫಲವನ್ನು ನೀಡುತ್ತಿದೆಯೇ , ಅದನ್ನು ಸರಿಯಾದ ಅಂತಃಕರಣದಲ್ಲಿ ಪಾಲಿಸಲಾಗುತ್ತಿದೆಯೇ, ಎಂದು ನೋಡಿ ತಿಳಿದುಕೊಳ್ಳಲು ಸಜ್ಜಾಗಿರಬೇಕಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ, ಈ ಮೌಲ್ಯಮಾಪನವು ಬೋಧನೆ-ಕಲಿಕೆಯ ಪ್ರಕ್ರಿಯೆಯನ್ನು ಸುಧಾರಿಸುತ್ತದೆಯೇ ಮತ್ತು ಯಾವ  ರೀತಿಯ ಮೌಲ್ಯಮಾಪನಗಳನ್ನು ಶಿಕ್ಷಕರು ಅರ್ಥಮಾಡಿಕೊಳ್ಳಬೇಕು?

**ಸಾಂಪ್ರದಾಯಿಕ ಪದ್ಧತಿಗಳು**

ಸಾಂಪ್ರದಾಯಿಕ ಪದ್ಧತಿಯಲ್ಲಿ ವಿದ್ಯಾರ್ಥಿಗಳು ಪ್ರಶ್ನೆಗಳಿಗೆ ಉತ್ತರ ಬರೆಯುತ್ತಾರೆ. ಆದರೆ ಅವರಿಗೆ ತಕ್ಷಣಕ್ಕೆ ಶಿಕ್ಷಕರಿಂದ ಅವರು ಬರೆದ ಉತ್ತರ ಸರಿಯೇ ತಪ್ಪೇ ಎಂಬ ಬಗ್ಗೆ ತಿಳಿಯುವುದಿಲ್ಲ. ಅದಲ್ಲದೆ, ಮೌಲ್ಯಮಾಪನವು ದೀರ್ಘಸಮಯ ತೆಗೆದುಕೊಳ್ಳುತ್ತದೆ ಮತ್ತು ಸಾಮಾನ್ಯವಾಗಿ ಶಿಕ್ಷಕರೊಬ್ಬರೇ ಮೌಲ್ಯಮಾಪನ ಮಾಡುತ್ತಾರೆ. ಇದನ್ನು ನಾವು *ತೆರೆದ ಕುಣಿಕೆ ಮಾದರಿ*ಯ ಮೌಲ್ಯಮಾಪನ (open loop model of assessment)[2] ಎಂದು ಕರೆಯಬಹುದು; ಇದರಲ್ಲಿ ಹಿಮ್ಮಾಹಿತಿ ನೀಡುವ ಆವರ್ತನ ಮತ್ತು ಅದರ ಗುಣಮಟ್ಟ ಎರಡರಲ್ಲೂ ಮಹತ್ತರ ಬದಲಾವಣೆ ಕಾಣಬಹುದು (ಚಿತ್ರ 2). ಈ ಮಾದರಿಯಲ್ಲಿ ಶಿಕ್ಷಕರು ಸಾಧಾರಣವಾಗಿ, ವಿವಿಧ ಪ್ರಶ್ನೆಗಳಿಗೆ ಮನೆಗೆಲಸ ಅಥವಾ ಪರೀಕ್ಷೆಯ ಮೂಲಕ ವಿದ್ಯಾರ್ಥಿಗಳಿಂದ (40-100) ಉತ್ತರಗಳನ್ನು ಸಂಗ್ರಹಿಸುತ್ತಾರೆ. ಬಹುತೇಕ ಸಂದರ್ಭಗಳಲ್ಲಿ, ಶಿಕ್ಷಕರು ನಿಗದಿತ ಸಮಯದೊಳಗೆ ಮನೆಗೆಲಸ/ಉತ್ತರ ಪತ್ರಿಕೆಗಳನ್ನು ಪರಿಶೀಲಿಸುವ ಮತ್ತು ನಿರ್ದಿಷ್ಟ ಪಠ್ಯಗಳನ್ನು ಮುಗಿಸುವ ಒತ್ತಡಕ್ಕೆ ಒಳಗಾಗಿರುತ್ತಾರೆ. ಶಿಕ್ಷಕರ ಕೊರತೆಯಿಂದಾಗಿ ಒಬ್ಬರೇ ಶಿಕ್ಷಕರು ಅನೇಕ ವಿಷಯಗಳನ್ನು ಪಾಠ ಮಾಡಬೇಕಾಗಿರುವುದರಿಂದ, ಆ ವಿಷಯಗಳ ಪಠ್ಯವನ್ನು ಅಂತಿಮ ಪರೀಕ್ಷೆಯ ಹೊತ್ತಿಗೆ ಮುಗಿಸಬೇಕಾಗಿರುತ್ತದೆ. ಇಲ್ಲಿ 'ಪಠ್ಯಕ್ರಮ ಮುಗಿಸುವಿಕೆ' ಯ ಅರ್ಥ ಶಿಕ್ಷಕರಿಂದ ಶಿಕ್ಷಕರಿಗೆ ಬದಲಾಗುತ್ತದೆ. ಈ ವ್ಯಕ್ತಿನಿಷ್ಠತೆಯೇ ಕಲಿಕೆಯ ಸೂಚಕದಲ್ಲಿ ಅಂಸಗತೆ ಕಂಡುಬರಲು ಕಾರಣವಾಗಿರುತ್ತದೆ.

“ತೆರೆದ ಕುಣಿಕೆ ಮಾದರಿ”

ತರಗತಿ/ಪರೀಕ್ಷೆಯ ಮೌಲ್ಯಮಾಪನದ ಸಾಂಪ್ರದಾಯಿಕ ಮಾದರಿ/ಪರೀಕ್ಷೆಯ ಉತ್ತರಗಳು

ವಿದ್ಯಾರ್ಥಿಗಳು ಹೋಂವರ್ಕ್/ಪ್ರಶ್ನೋತ್ತರ ಬರೆಯುವುದು---------ಶಿಕ್ಷಕರು ಸಂಗ್ರಹಿಸುವುದು---- ನಿಧಾನ ----------- ಯಾವುದೇ ರಚನಾತ್ಮಕ ಹಿಮ್ಮಾಹಿತಿ ನೀಡದೆ ಶಿಕ್ಷಕರು ಉತ್ತರಗಳನ್ನು ತಪ್ಪು ಸರಿ ಎಂದು ಹಾಕುವುದು-----------ನಿಧಾನ---------ವಿದ್ಯಾರ್ಥಿಗಳು "ಸರಿಯಾದ " ಉತ್ತರಗಳನ್ನು ಉರುಹೊಡೆಯತ್ತಾರೆ---------ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತರ ಬರೆಯುತ್ತಾರೆ------ನಿಧಾನ---------- ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿ ಫಲಿತಾಂಶ ಪ್ರಕಟಿಸುವುದು------- ನಿಧಾನ -------- ಫಲಿತಾಂಶ ಪ್ರಕಟಣೆ- ಯಾವುದೇ ಹಿಮ್ಮಾಹಿತಿ ನೀಡದೆ ಅಂಕಗಳನ್ನು ಹೇಳುವುದು

ವಿದ್ಯಾರ್ಥಿಗಳು ಪಾಠವನ್ನು ಮನೆಯಲ್ಲಿ ಓದಿಕೊಳ್ಳಬಹುದು-------------ತರಗತಿಯಲ್ಲಿ ಶಿಕ್ಷಕರು ಪಾಠ ಮಾಡುತ್ತಾರೆ---------ವಿದ್ಯಾರ್ಥಿಗಳು ಪಾಠಗಳನ್ನು ತಮ್ಮಷ್ಟಕ್ಕೇ ತಾವೇ ಓದಿಕೊಳ್ಳಬಹುದು

ಚಿತ್ರ 2. ತೆರೆದ ಕುಣಿಕೆ ಮಾದರಿ ಮೌಲ್ಯಮಾಪನ- ವಿದ್ಯಾರ್ಥಿಗಳ ಉತ್ತರಗಳನ್ನು ಪರೀಕ್ಷಿಸುವ ಸಾಂಪ್ರದಾಯಿಕ ಪದ್ಧತಿ

ಸ್ವ-ಮೌಲ್ಯಮಾಪನದಲ್ಲಿ ವಿದ್ಯಾರ್ಥಿಗಳು ತಮ್ಮ ಉತ್ತರಗಳನ್ನು ತಾವೇ ಪರೀಕ್ಷಿಸಿಕೊಳ್ಳುತ್ತಾರೆ. ಬಹುತೇಕ ಸಂದರ್ಭಗಳಲ್ಲಿ, ಇದು ವಿದ್ಯಾರ್ಥಿಗಳು ಉತ್ತರ ಬರೆದ ಕೂಡಲೇ, ಅವರ ನೆನಪು ಇನ್ನೂ ಹಸಿಯಾಗಿರುವಾಗಲೇ ನಡೆಯುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಸ್ವ-ಮೌಲ್ಯಮಾಪನವು ವಿದ್ಯಾರ್ಥಿಗಳಿಗೆ ಸರಿಯಾದ ಉತ್ತರವನ್ನು ಸ್ವತಃ ನೋಡಿ ಕಲಿಯುವಂತೆ ಮಾಡುತ್ತದೆ. ನಾವಿದನ್ನು ಮುಚ್ಚಿದ ಕುಣಿಕೆ ಮಾದರಿಯ ಮೌಲ್ಯಮಾಪನ (closed loop model)[3] ಎಂದು ಕರೆಯಬಹುದು. ಹಿಮ್ಮಾಹಿತಿ ಕುಣಿಕೆಯು ಕಲಿಕೆಯನ್ನು ಪುನರ್ಬಲನಗೊಳಿಸುತ್ತದೆ (ಚಿತ್ರ 3 ನೋಡಿ).

ಮುಚ್ಚಿದ ಕುಣಿಕೆ ಮಾದರಿ

ತರಗತಿಯಲ್ಲಿ ಪರೀಕ್ಷೆ ಮತ್ತು ಮೌಲ್ಯಮಾಪನ/ಹಿಮ್ಮಾಹಿತಿ ನೀಡಿದ ಪರೀಕ್ಷಾ ಉತ್ತರಗಳು

ವಿದ್ಯಾರ್ಥಿಗಳು ಹೋಂವರ್ಕ್/ಪ್ರಶ್ನೋತ್ತರ ಬರೆಯುತ್ತಾರೆ---**ಶಿಕ್ಷಕರು** ಸ್ವ-ಮೌಲ್ಯಮಾಪನ **ಮಾಡಿಕೊಳ್ಳಲು ಸುಗಮಗೊಳಿಸುತ್ತಾರೆ**----"ದುರ್ಬಲ"ವಾದ ಕ್ಷೇತ್ರಗಳಲ್ಲಿ ಪ್ರಶ್ನೆಗಳನ್ನು ಅಭ್ಯಾಸ ಮಾಡಿ ಚರ್ಚಿಸುವುದು, ಶಿಕ್ಷಕರು ಸ್ವ-ಮೌಲ್ಯಮಾಪನವನ್ನು ಪರಿಶೀಲಿಸುತ್ತಾರೆ---ಶಿಕ್ಷಕರಿಂದ ರೂಪಣಾತ್ಮಕ ಮೌಲ್ಯಮಾಪನ---ವಿದ್ಯಾರ್ಥಿಗಳು ಉತ್ತಮವಾಗಿ ಮೌಲ್ಯಮಾಪನ ಮಾಡಲು ಕಲಿಯುತ್ತಾರೆ---ವಿದ್ಯಾರ್ಥಿಗಳು ಪರೀಕ್ಷೆ ಬರೆಯುತ್ತಾರೆ---ಉತ್ತರ ಪತ್ರಿಕೆಗಳನ್ನು ಪರಿಶೀಲಿಸಿ, ಫಲಿತಾಂಶ ಪ್ರಕಟಿಸುವುದು– ಯಾವುದೇ ಹಿಮ್ಮಾಹಿತಿ ನೀಡದೆ ಫಲಿತಾಂಶ ಪ್ರಕಟಣೆ

ವಿದ್ಯಾರ್ಥಿಗಳು ಪಾಠಗಳನ್ನು ಓದಿಕೊಳ್ಳಬಹುದು-----ತರಗತಿಯಲ್ಲಿ ಶಿಕ್ಷಕರು ಪಾಠ ಮಾಡುತ್ತಾರೆ

ವಿದ್ಯಾರ್ಥಿಗಳು ಪಾಠಗಳನ್ನು ತಮ್ಮಷ್ಟಕ್ಕೇ ತಾವೇ ಓದಿಕೊಳ್ಳಬಹುದು

ವಿದ್ಯಾರ್ಥಿಗಳು ತಮ್ಮ ಉತ್ತರವನ್ನು ತಾವೇ ಪರೀಕ್ಷೆ ಮಾಡಿಕೊಳ್ಳುತ್ತಾರೆ

ವಿದ್ಯಾರ್ಥಿಗಳು ತಮ್ಮ ತಪ್ಪುಗಳನ್ನು ಗುರುತಿಸುತ್ತಾರೆ

ಪುನರಾವರ್ತನೆಯ ಕನಿಷ್ಠ ಒಂದು ಆವರ್ತನ , ಪರಿಹಾರ ಕ್ರಿಯೆಯೊಂದಿಗೆ ವಿದ್ಯಾರ್ಥಿಗಳಿಂದಲೇ ನಡೆಯುತ್ತದೆ

ತಮಗೆ ತಾವೇ ಸರಿಯುತ್ತರ ಬರೆಯುವ ವಿಧಾನ ಕಂಡುಕೊಳ್ಳುತ್ತಾರೆ

ಪುನರಾವರ್ತನೆಯ ಒಂದು ಆವರ್ತನ ತಕ್ಷಣ ನಡೆಯುತ್ತದೆ

ಚಿತ್ರ 3. ಮುಚ್ಚಿದ ಕುಣಿಕೆ ಮಾದರಿಯ ಮೌಲ್ಯಮಾಪನ- ಉತ್ತರಗಳಿಗೆ ಹಿಮ್ಮಾಹಿತಿ ನೀಡಿ ಮಾಡಿದ ವಿದ್ಯಾರ್ಥಿಗಳ ಮೌಲ್ಯಮಾಪನ

ಒಬ್ಬ ಶಿಕ್ಷಕಿಯಾಗಿ ಈ ಸ್ವ-ಮೌಲ್ಯಮಾಪನ ಕ್ರಮವು ನನಗೆ ವಿದ್ಯಾರ್ಥಿಗಳ ಕೆಲವು ದೌರ್ಬಲ್ಯಗಳನ್ನು ಅರ್ಥಮಾಡಿಕೊಳ್ಳಲು ಸಹಾಯಮಾಡಿತು. ಉದಾಹರಣೆಗೆ, ಈ ಸ್ವ-ಮೌಲ್ಯಮಾಪನ ಅಭ್ಯಾಸದಿಂದ ವಿದ್ಯಾರ್ಥಿಗಳು ಪಾಠವನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಪಡೆದರು, ಕತೆಯ ತಾರ್ಕಿಕ ಗತಿವಿಧಾನವನ್ನು ಅರ್ಥೈಸಿಕೊಂಡರು, ಸಮಾನಾರ್ಥಕ ಪದಗಳನ್ನು ಬರೆಯಲು ಪ್ರಯತ್ನಿಸಿದರು. ಆದರೂ ಕಾಲ ಪ್ರತ್ಯಯಗಳ ಬಗ್ಗೆ ಅವರಿಗೆ ಗೊಂದಲಗಳಿದ್ದವು ಮತ್ತು ಆ ವಿಷಯದಲ್ಲಿ ಅವರಿಗೆ ಮತ್ತಷ್ಟು ಬೆಂಬಲ ಬೇಕಾಗಿತ್ತು.

ಅಂತೂ ಈ ಚಟುವಟಿಕೆಯ ಯಶಸ್ಸಿನಿಂದ ಸುಮನ್ ಗೆ ಉತ್ಸಾಹ ಬಂದಿತ್ತು, “ಖಂಡಿತ ಒಪ್ಕೋಬೇಕು. ಈ ವಿಧಾನ ನಿಜವಾಗಲೂ ಕೆಲಸ ಮಾಡ್ತಾಯಿದೆ. ಮಿನು ಕೂಡ (ಹೆಸರು ಬದಲಾಯಿಸಲಾಗಿದೆ) ಆಸಕ್ತಿ ತೋರಿಸ್ತಾಯಿದಾಳೆ! ಆದರೂ, ಇದೂ ಕೂಡ ಸಾಕಷ್ಟು ಸಮಯ ತಗೊಳುತ್ತೆ. ನಾನು ಎಲ್ಲಾ ಪಾಠಗಳಿಗೂ ಇದನ್ನು ಮಾಡಲಾರೆ.”

ಹೌದು, ಶಿಕ್ಷಕರಿಗಿರುವ ಅನೇಕ ಕೆಲಸಗಳನ್ನು ನೋಡಿದಾಗ- ಆಡಳಿತಕ್ಕೆ ಸಂಬಂಧಪಟ್ಟ ಕೆಲಸಗಳು ಕೂಡ ಅವರ ಸಮಯ ತೆಗೆದುಕೊಳ್ಳುತ್ತವೆ- ಎಲ್ಲಾ ಪಾಠಗಳಿಗೂ ಈ ಚಟುವಟಿಕೆ ಮಾಡುವುದು ಸಾಧ್ಯವಿಲ್ಲ. ಅದೇನೇ ಇದ್ದರೂ, ನಾನು ಅವರಿಗೆ ಹೇಳಿದೆ, ಪ್ರಾರಂಭದಿಂದಲೇ ಹೀಗೆ ಮಾಡುತ್ತಾ ಬಂದರೆ ವಿದ್ಯಾರ್ಥಿಗಳು ಬೇಗನೆ ಕಲಿಯುತ್ತಾರೆ ಎಂದು. ಎಲ್ಲಕ್ಕಿಂತ ಹೆಚ್ಚಾಗಿ ಇದು ವಿದ್ಯಾರ್ಥಿಗಳ ಕಲಿಯುವ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ ಮತ್ತು ಶಿಕ್ಷಕರ ಸಮಯ ಉಳಿಸುತ್ತದೆ. “ಈ ಚಟುವಟಿಕೆಯನ್ನು ನಡೆಸುವ ಉಪಾಯವೇನೆಂದರೆ, ಆಯ್ದ ಪಾಠಗಳಿಗೆ ಮತ್ತು ನಿಗದಿಪಡಿಸಿಕೊಂಡ ಸಮಯಕ್ಕೊಮ್ಮೆ ಮಾಡುವುದು. ಇದರಿಂದ ವಾಸ್ತವಿಕವಾದ ಮೌಲ್ಯಮಾಪನ ಮಾಡಲು ಅನುಕೂಲವಾಗುವುದಲ್ಲದೆ  ನಿಮ್ಮ ತರಗತಿಯ ಮಕ್ಕಳನ್ನು ನಿರಂತರವಾಗಿ ಪರೀಕ್ಷಿಸುತ್ತಿರಬಹುದು” ಎಂದೆ.

“ಭಾಷೆಯಲ್ಲಿ ಮತ್ತು ಕಲಿಕೆಯಲ್ಲಿ ಕಲಿಕಾರ್ಥಿಯ ಬೆಳವಣಿಗೆಯಲ್ಲಿ ಹೆಚ್ಚು ಹೆಚ್ಚು ವಿವರಣಾತ್ಮಕ ದಾಖಲೆಗಳನ್ನು ಬಳಸಿ  ಭಾಷೆಯ ಅಭಿವೃದ್ಧಿ ಮತ್ತು ಇತರ ಪಠ್ಯಕ್ರಮ ಚಟುವಟಿಕೆಗಳ ಪ್ರಗತಿಯನ್ನು ಅಳೆಯುವ ಮೂಲಕ ” (ರಿಯಾ-ಡಿಕೆನ್ಸ್ ಮತ್ತು ರಿಕ್ಸನ್, 1997, ಪುಟ-151), ಕಲಿಕಾರ್ಥಿಗಳು ತಮ್ಮ

ಪ್ರಗತಿಯ ಬಗ್ಗೆ ಒಳನೋಟಗಳನ್ನು ಬೆಳೆಸಿಕೊಳ್ಳಲು ಸಮರ್ಥರನ್ನಾಗಿಸಬಹುದು. ಇಲ್ಲಿ, ಬೋಧನೆ-ಕಲಿಕೆಯ ಪ್ರಕ್ರಿಯೆಗಳು ವ್ಯಾಕರಣದ ಮೇಲಿನ ಹಿಡಿತ, ಭಾಷೆಯ ನಿಖರತೆ ಬಗ್ಗೆ ಕೇಂದ್ರಿಕೃತವಾಗದೆ ಸಂವಹನ ಸಾಮರ್ಥ್ಯಗಳತ್ತ ಕೇಂದ್ರೀಕೃತವಾಗುತ್ತದೆ.

ಕಳೆದೊಂದು ದಶಕದಲ್ಲಿ ಭಾರತವು ಇಂಗ್ಲೀಷ್ ಬೋಧನೆಯತ್ತ ಒಲವು ಹೆಚ್ಚಾಗಿರುವುದನ್ನು ಕಾಣುತ್ತಿದೆ. 2005 ರಿಂದ, ರಚನಾತ್ಮಕ, ಶಿಕ್ಷಕ-ಕೇಂದ್ರಿತ ಮಾರ್ಗದ ಬೋಧನೆಯಿಂದ, ಸಂವಹನ ಕೇಂದ್ರಿತ ಹಾಗೂ ಒಳಗೊಳ್ಳುವಿಕೆಯತ್ತ ಬದಲಾಗಿರುವುದು ಗಮನಾರ್ಹವಾಗಿ ಕಂಡುಬರುತ್ತಿದೆ. "ಅಸೆಸ್ಮೆಂಟ್ ಆಫ್ ಯಂಗ್ ಲರ್ನರ್ಸ್" ಎಂಬ ತಮ್ಮ ಲೇಖನದಲ್ಲಿ ಕೆ. ಶಾಬಾನ್, ಸ್ಟೀವಿಕ್ (1990), ಕ್ರಶೆನ್ (1982) ಮತ್ತು ಅಶೆರ್ (1988) ರವರವನ್ನು ಉಲ್ಲೇಖಿಸುತ್ತಾ, "ಇಎಫ್ ಎಲ್/ಇಎಸ್ ಎಲ್ ಬೋಧನೆಯ ಹೊಸ ಮಾರ್ಗದ ಪ್ರಕಾರ ವಿದೇಶಿ/ದ್ವಿತೀಯ ಭಾಷೆಯೊಂದನ್ನು ಕಲಿಯಲು ಭಾವನಾತ್ಮಕ ಪರಿಗಣನೆಗಳು ಪ್ರಮುಖವಾಗಿವೆ: ಅವು ಕಲಿಕಾರ್ಥಿಗಳಿಗೆ ಸಹಾಯ ಮಾಡುವಂಥ, ಕಲಿಕಾರ್ಥಿಗಳ ಆತಂಕವನ್ನು ದೂರಮಾಡುವಂಥ ವಾತಾವರಣದಲ್ಲಿ ಕಲಿಕೆ ಆಗುವಂತಹ ಬೋಧನಾ ತಂತ್ರಗಳನ್ನು ಅಳವಡಿಸಿಕೊಳ್ಳಲು ಸಲಹೆ ನೀಡುತ್ತವೆ (ಶಾಬಾನ್, 2005, ಪುಟ-1).

**ಪರ್ಯಾಯ ಮಾದರಿಗಳ ಅವಶ್ಯಕತೆ**

ಈ ಮೌಲ್ಯಮಾಪನ ಕ್ರಮವು ಮಾನವೀಯವಾದ , ವಿದ್ಯಾರ್ಥಿ ಕೇಂದ್ರಿತ ಪ್ರಕ್ರಿಯೆಗೆ ಕರೆ ನೀಡುತ್ತದೆ ಎಂಬುದಂತೂ ಸ್ಪಷ್ಟವಾಗಿದೆ. ಸಾಂಪ್ರದಾಯಿಕ ಪೇಪರ್ ಪೆನ್ನು ಪರೀಕ್ಷೆಯ ಕ್ರಮವು ಮೌಲ್ಯಮಾಪನದ ಪ್ರಕ್ರಿಯೆಯಲ್ಲಿ ಕಲಿಕಾರ್ಥಿಗಳನ್ನು ಸಮಗ್ರವಾಗಿ ಒಳಗೊಳ್ಳಗೊಡುವುದಿಲ್ಲ. ಮತ್ತೊಂದೆಡೆ ರಚನಾತ್ಮಕ ಮೌಲ್ಯಮಾಪನವು, ಅನೇಕ ತಂತ್ರಗಳನ್ನು ಮತ್ತು ಚಟುವಟಿಕೆಗಳನ್ನು ಅಡಕವಾಗಿಸಿಕೊಂಡಿದ್ದು ಅದರಲ್ಲಿ ಕಲಿಕಾರ್ಥಿಗಳೂ ಭಾಗವಹಿಸುವುದನ್ನು ನಿಶ್ಚಿತಗೊಳಿಸಿಕೊಳ್ಳುತ್ತದೆ. ಪರ್ಯಾಯ ಮೌಲ್ಯಮಾಪನವೆಂದು ಕರೆಸಿಕೊಂಡಿರುವ ಈ ತಂತ್ರಗಳನ್ನು ಹೀಗೆ ವಿವರಿಸಬಹುದು, "ಓರ್ವ ವಿದ್ಯಾರ್ಥಿಗೆ ಏನು ಗೊತ್ತು ಅಥವಾ ಓರ್ವ ವಿದ್ಯಾರ್ಥಿಯು ಏನನ್ನು ಮಾಡಬಲ್ಲ ಎಂಬುದನ್ನು ಕಂಡುಕೊಳ್ಳುವ, ವಿದ್ಯಾರ್ಥಿಯ ಬೆಳವಣಿಗೆಯನ್ನು ತೋರಿಸುವ ಮತ್ತು ಮಾಹಿತಿಯನ್ನು ಸೂಚಿಸುವ ಅಪ್ರಮಾಣಿತವಾದ ಮತ್ತು ಅಸಾಂಪ್ರಾದಾಯಿಕವಾದ ಯಾವುದೇ ವಿಧಾನ" .(ಪಿಯರ್ಸ್ ಓ ಮೆಲೆ, 1992, ಪುಟ-2).

ರಚನಾತ್ಮಕ ಮೌಲ್ಯಮಾಪನವು ನಿಜವಾಗಿಯೂ ಮೌಲ್ಯಮಾಪನವನ್ನು ಸುಧಾರಿಸಲು ಬಯಸುವ ಶಿಕ್ಷರಿಗೆ ಒಂದು ಶಕ್ತಿಯುತ ಸಾಧನವಾಗಿದೆ. ಪೋಫಾಮ್ (2008) ರವರ ಪ್ರಕಾರ, ರಚನಾತ್ಮಕ ಮೌಲ್ಯಮಾಪನದ ಕೆಲಸವೇನೆಂದರೆ ವಿದ್ಯಾರ್ಥಿಗಳ ಕಲಿಕೆಯನ್ನು ವೃದ್ಧಿಸುವುದಕ್ಕೆ ಬೇಕಾದ

ಪ್ರಮಾಣಗಳನ್ನು ಒದಗಿಸುವುದು . " (ಪೋಫಾಮ್ ನಲ್ಲಿ ಹೇಳಿದಂತೆ 2009). ಸಂಕಲನಾತ್ಮಕ ಮೌಲ್ಯಮಾಪನವು, "..ಈಗಾಗಲೇ ಪೂರ್ಣಗೊಳಿಸಿರುವ ಸೂಚನೆಗಳ ಗುಣಮಟ್ಟವನ್ನು, ಒಂದು ವರ್ಷದ ಶಾಲಾವಧಿ ಅಥವಾ ಸೆಮಿಸ್ಟರ್ ಅವಧಿಯ ಕೋರ್ಸಿನ ಪರಿಣಾಮದಂತಹ, ಈಗಾಗಲೇ ಮಾಡಿ ಮುಗಿಸಿರುವಂತಹ ಸೂಚನಾತ್ಮಕ ಪ್ರಸಂಗಗಳ ಮೌಲ್ಯಮಾಪನ ಮಾಡುವ ನಿರ್ಣಯಕ್ಕೆ ಬರಲು ಪ್ರಮಾಣ ಒದಗಿಸುವುದನ್ನು ಒಳಗೊಳ್ಳುತ್ತದೆ" (ಪೋಫಾಮ್ ನಲ್ಲಿ ಹೇಳಿದಂತೆ 2009).

ವಿವಿಧ ರೀತಿಯ ಸಾಧನಗಳನ್ನು ಬಳಸಿ ವಿದ್ಯಾರ್ಥಿಗಳನ್ನು ಪರೀಕ್ಷಿಸಿದಾಗ, ಅವರ ಕಲಿಕೆಯ ವಿವಿಧ ಅವಶ್ಯಕತೆಗಳಾದಂತಹ' ಅವರ ಆಸಕ್ತಿಯನ್ನು, ಹಾಗು ಅವರ ಕಲಿಕಾ ಶೈಲಿಯನ್ನು ಅರ್ಥಮಾಡಿಕೊಳ್ಳುತ್ತೇವೆ. ಆಗ ಸುಮ್ಮನೆ ಸಂಕಲನಾತ್ಮಕ ಮೌಲ್ಯಮಾಪನ ಮಾಡುವ ಬದಲು ಚಟುವಟಿಕೆಗಳನ್ನು ವಿದ್ಯಾರ್ಥಿಗಳ ಅವಶ್ಯಕತೆಗೆ ತಕ್ಕಂತೆ, ಧನಾತ್ಮಕ ಭಾವವನ್ನು ಪೋಷಿಸುವ ಗುರಿಯೊಂದಿಗೆ ರೂಪಿಸಲಾಗುತ್ತದೆ.

ಪರ್ಯಾಯ ಮೌಲ್ಯಮಾಪನದ ಮುಖ್ಯಾಂಶಗಳು:

- ಚಟುವಟಿಕೆಗಳು ಮತ್ತು ಮಾಡತಕ್ಕ ಕಾರ್ಯಗಳು ಅಧಿಕೃತವಾಗಿರುತ್ತವೆ
- ಸರಿ/ತಪ್ಪು ಉತ್ತರಗಳಿಗೆ ಬದಲಾಗಿ ಸಂವಹನಕ್ಕೆ ಹೆಚ್ಚಿನ ಒತ್ತು ನೀಡಲಾಗುತ್ತದೆ
- ಸ್ವ-ಮೌಲ್ಯಮಾಪನ ಮತ್ತು ಸಹಪಾಠಿಗಳ ಮೌಲ್ಯಮಾಪನಗಳು ಪರ್ಯಾಯ ಮೌಲ್ಯಮಾಪನದ ಸಮಗ್ರ ಭಾಗವಾಗಿರುತ್ತವೆ

ಪರ್ಯಾಯ ಮೌಲ್ಯಮಾಪನವು ಚೈತನ್ಯದಾಯಕ ಭಾಷಾ ಬೆಳವಣಿಗೆಗೆ ಅವಕಾಶ ನೀಡುತ್ತದೆ. ಮೌಲ್ಯಮಾಪನ ತಂತ್ರಗಳಾದ ಅಶಾಬ್ದಿಕ, ಮೌಖಿಕ ಪ್ರತಿಕ್ರಿಯೆಗಳು, ಬರವಣಿಗೆಗಳು, ಪ್ರಸ್ತುತಿಗಳು, ಸಂಪುಟಗಳು, ನಿಯೋಜಿತ ಕಾರ್ಯಗಳು, ವಿದ್ಯಾರ್ಥಿಗಳ ನಡುವಿನ ಪರಸ್ಪರ ಕಲೆಯುವಿಕೆ, ಸ್ವ-ಮೌಲ್ಯಮಾಪನ ಮತ್ತು ಸಹಪಾಠಿಗಳ ಮೌಲ್ಯಮಾಪನಗಳು ವಿದ್ಯಾರ್ಥಿಗಳಿಗೆ, ಅವರು ಭಾಷೆಯ ಮೂಲಕ ಹೇಗೆ ವೈವಿಧ್ಯಮಯ ಚಟುವಟಿಕೆಗಳನ್ನು, ಕಾರ್ಯಗಳನ್ನು ಮಾಡಬಹುದು ಎಂಬುದನ್ನು ತೋರಿಸಿಕೊಡುತ್ತವೆ. ಆಗ ಕಲಿಕಾ ವಾತಾವರಣವು ಭಯಮುಕ್ತವಾಗಿರುವುದರಿಂದ ಅದು ನಿಜವಾಗಿಯೂ ಸಣ್ಣ ಪರೀಕ್ಷೆಗಳು, ಸಮೀಕ್ಷೆಗಳು, ಇತರ ವಿದ್ಯಾರ್ಥಿ ವೇತನಗಳು ಮುಂತಾದವುಗಳನ್ನು ಒಳಗೊಂಡ ಸಂಕಲನಾತ್ಮಕ ಮೌಲ್ಯಮಾಪನಕ್ಕೆ ವಿದ್ಯಾರ್ಥಿಗಳು ಸಿದ್ಧರಾಗಲು ಸಹಾಯಮಾಡುತ್ತದೆ. ಆತ್ಮವಿಶ್ವಾಸ ಬೆಳೆಸಿಕೊಳ್ಳುವ ಮೂಲಕ, ತಾವು ಕಲಿತಿರುವುದನ್ನು ಮೌಲ್ಯಮಾಪನ ಮಾಡುವುದರಲ್ಲಿರುವ ವ್ಯತ್ಯಾಸಗಳನ್ನು ಅರ್ಥಮಾಡಿಕೊಳ್ಳುತ್ತಾರೆ. ವಿದ್ಯಾರ್ಥಿಗಳು ಸ್ವ-ಮೌಲ್ಯಮಾಪನದಲ್ಲಿ ತೊಡಗಿಕೊಂಡಾಗ, ಅದು

ಪರೀಕ್ಷೆಯ ಫಲಿತಾಂಶದ ಮೇಲೆ ಪರಿಣಾಮ ಬೀರುತ್ತದೆ ಮತ್ತು ಅಲ್ಲಿನ ಎಲ್ಲಾ ಫಲಾನುಭವಿಗಳಲ್ಲಿ ನಿರಂತರ ಸಂವಹನ ನಡೆಯುವಂಥ ಅವಕಾಶವು ಇರುತ್ತದೆ.

ಪರ್ಯಾಯ ಮೌಲ್ಯಮಾಪನವು, ವಿದ್ಯಾರ್ಥಿಗಳ ಆಸಕ್ತಿ, ವಯಸ್ಸು, ಜ್ಞಾನಾತ್ಮಕ ಹಂತ ಮತ್ತು ವಿದ್ಯಾರ್ಥಿಗಳ ಸಂದರ್ಭಗಳಿಗೆ ತಕ್ಕ ವಿಷಯ ಅಥವಾ ವಾದವಿಷಯಗಳನ್ನು ವಿನ್ಯಾಸಗೊಳಿಸಿದ ಅಧಿಕೃತ ಚಟುವಟಿಕೆಗಳನ್ನು ಅಥವಾ ಒಳಗೊಳ್ಳುತ್ತದೆ. ಈ ಚಟುವಟಿಕೆ ಕಾರ್ಯಗಳು ಭಾಷಾ ಕಲಿಕೆಯ ಪ್ರಕ್ರಿಯೆಯ ಮಾರ್ಗವನ್ನು ಹೊಂದಿದ್ದು ವಾಸ್ತವ ಜಗತ್ತಿನ ಸನ್ನಿವೇಶಗಳಿಗೆ ಸಂಬಂಧ ಕಲ್ಪಿಸುತ್ತವೆ. ಅವು ಭಾಷೆಯನ್ನು ಸುಮ್ಮನೆ ಪುನರಾವರ್ತನೆ ಮಾಡದೆ ಸೃಜನಾತ್ಮಕವಾಗಿ ಬಳಸುವಂತೆ ಮಾಡುತ್ತವೆ. ಕ್ಯಾಂಪ್ಬೆಲ್ ಮತ್ತು ಇತರರ ಪ್ರಕಾರ.. "ಪರ್ಯಾಯ ಮೌಲ್ಯಮಾಪನವು ವಿದ್ಯಾರ್ಥಿಗಳನ್ನು ಜ್ಞಾನದ ಅನ್ವೇಷಕರನ್ನಾಗಿ ನೋಡುತ್ತದೆ, ".. ಇವರು ಹೆಚ್ಚು ಕ್ರಿಯಾಶೀಲರೂ, ಆಳವಾಗಿ ಅಧ್ಯಯನ ಮಾಡುವವರೂ, ಉನ್ನತ ಮಟ್ಟದ ಆಲೋಚನಾ ಕೌಶಲವನ್ನು ಸಂಯೋಗಿಸಿ ಬಳಸುವವರೂ ಆಗಿರುತ್ತಾರೆ" (ಬರ್ಗರ್ ನಲ್ಲಿ ಹೇಳಿದಂತೆ, 2008, ಪುಟ-33). ಪರೀಕ್ಷಿಸುವುದು ಮತ್ತು ಮೌಲ್ಯಮಾಪನಗಳು ವಿಶೇಷ ಮಾರ್ಗದಿಂದ ಸಾಮಾನ್ಯ ಮಾರ್ಗವನ್ನು ಅನುಸರಿಸಿವೆ. ಅದೇನೇ ಆದರೂ, ಇಂದಿನ ವಿದ್ಯಾರ್ಥಿ ಕೇಂದ್ರಿತ ತರಗತಿಗಳಲ್ಲಿ, ಶಿಕ್ಷಕರು ಸಾಮಾನ್ಯ ಮಾರ್ಗದಿಂದ ಮೇಲೇರುವ ಮಾರ್ಗಗಳನ್ನು ಅನುಸರಿಸಬೇಕಾದ ಅವಶ್ಯಕತೆಯಿದೆ.

ಆದರೂ, ಇದರಲ್ಲಿ ಕೇವಲ ಶಿಕ್ಷಕರನ್ನು ತರಬೇತಿಗೊಳಿಸಿದರೆ ಸಾಲದು, ವಿದ್ಯಾರ್ಥಿಗಳೂ ಅಂತಹ ಮೌಲ್ಯಮಾಪನ ಕ್ರಮಕ್ಕೆ ತಯಾರಾಗಿರಬೇಕಾಗುತ್ತದೆ. ಮೌಲ್ಯಮಾಪನವು ಬೋಧನೆ-ಕಲಿಕೆ ಪ್ರಕ್ರಿಯೆಯೊಳಗೆ ಹೆಣೆದುಕೊಂಡಿದ್ದಾಗ, ವಿದ್ಯಾರ್ಥಿಗಳಿಗೆ ಅನುಕೂಲವಾಗುವ ಬೆಂಬಲ ನೀಡುವ ಪರಿಸರವಿರುತ್ತದೆ. ಮೌಲ್ಯಮಾಪನದ ಬಗ್ಗೆ ಅವರೊಡನೆ ಮಾತನಾಡುವುದರಿಂದ ಅವರು ಮೌಲ್ಯಮಾಪನದ ಮಹತ್ವವನ್ನು ಅರಿತುಕೊಳ್ಳುತ್ತಾರೆ ಮತ್ತು ಮೌಲ್ಯಮಾಪನ ಮಾಡಲು ಅವರ ಯೋಜನೆಗಳನ್ನೂ ಒಳಗೊಳ್ಳುವುದು ಕಲಿಕೆಯಲ್ಲಿ ಅವರನ್ನು ಅರ್ಥಪೂರ್ಣವಾಗಿ ತೊಡಗಿಸುತ್ತದೆ.

ಪರಿಶೀಲನಾ ಪಟ್ಟಿ ಮತ್ತು ಸೂಚನಾ ಪಟ್ಟಿಗಳು ಸ್ವ ಮತ್ತು ಸಹಪಾಠಿಗಳ ಮೌಲ್ಯಮಾಪನಕ್ಕೆ ಪ್ರಯೋಜನಕಾರಿಯಾಗಿವೆ, ಏಕೆಂದರೆ ಅವು ಕಾರ್ಯಚಟುವಟಿಕೆಗಳನ್ನು ಮೌಲ್ಯಮಾಪನ ಮಾಡಲು ತರ್ಕಬದ್ಧತೆ ಮತ್ತು ಮಾನದಂಡಗಳನ್ನು ಒದಗಿಸುತ್ತವೆ. ಅಲ್ಲಿ ಪರ್ಯಾಲೋಚನೆಗೆ ಅವಕಾಶವಿದೆ. ಇದೇ ಅಭ್ಯಾಸ ಕಾಲಾನಂತರ ಒಟ್ಟಾರೆ ಕಲಿಕೆಯಲ್ಲಿ ಸುಧಾರಣೆ ತರುತ್ತದೆ. ಉದಾಹರಣೆಗೆ, ಬರವಣಿಗೆ ಅಭ್ಯಾಸಕ್ಕೆ ಪರಿಶೀಲನಾ ಪಟ್ಟಿ ಹೀಗಿರಹುದು:

- ಮುಖ್ಯ ವಿಚಾರವು ಪೀಠಿಕೆಯಲ್ಲಿ ಚರ್ಚಿತವಾಗಿದೆಯೇ?

- ಪ್ರತಿ ಪ್ಯಾರಾದ ಮೊದಲ ವಾಕ್ಯವು ವಿಷಯವನ್ನು ಒಳಗೊಂಡಿದೆಯೇ?
- ಪ್ಯಾರಾಗಳ ನಡುವೆ ಸಂಬಂಧವಿದಯೇ?
- ಬರಹದ ಅಂತ್ಯದಲ್ಲಿ ಉಪಸಂಹಾರವಿದೆಯೇ?

ಬರವಣಿಗೆ ಪ್ರಕ್ರಿಯೆಯನ್ನು ಪರಿಶೀಲನಾ ಪಟ್ಟಿಯನ್ನು ಬಳಸಿ ವಿಮರ್ಶೆ ಮಾಡಿಕೊಳ್ಳುವುದರಿಂದ, ವಿಷಯ ಯಾವುದೇ ಇರಲಿ, ವಿದ್ಯಾರ್ಥಿಗಳಿಗೆ ಅವರ ಸಾಮರ್ಥ್ಯಗಳನ್ನು ಮತ್ತು ದೌರ್ಬಲ್ಯಗಳನ್ನು ಅರ್ಥಮಾಡಿಕೊಳ್ಳಲು ಸಹಾಯವಾಗುತ್ತದೆ. ಈ ಪರಿಶೀಲನಾ ಅಂಶಗಳನ್ನು ಸ್ವ-ಮೌಲ್ಯಮಾಪನದಲ್ಲಿಯೂ ಉಪಯೋಗಿಸಬಹುದು. ಉದಾಹರಣೆಗೆ, ಮಾತನಾಡುವ ಚಟುವಟಿಕೆಯಲ್ಲಿ ಸ್ವ-ಮೌಲ್ಯಮಾಪನವು ಈ ಕೆಳಗಿನ ಅಂಶಗಳನ್ನು ಒಳಗೊಂಡಿರಬಹುದು:

- ವಿಷಯವನ್ನು ಪರಿಚಯಿಸಲು ನಾನು ಸೂಕ್ತ ಹೇಳಿಕೆಯನ್ನು ಹೊಂದಿದ್ದೇನೆಯೇ?
- ನಾನು ಹೇಳಬೇಕಿರುವ ಅಂಶಗಳನ್ನು ಅನುಕ್ರಮದಲ್ಲಿ ಜೋಡಿಸಿದ್ದೇನೆಯೇ?
- ನಾನು ಸೂಕ್ತ ಮುಕ್ತಾಯ ಹೊಂದಿದ್ದೇನೆಯೇ?
- ಮಾತನಾಡುವಾಗ ನಾನು ಪ್ರೇಕ್ಷಕರನ್ನು ನೋಡುತ್ತಿದ್ದೇನೆಯೇ ?

ಸೂಚನಾ ಪಟ್ಟಿಯೊಂದಿಗೆ , ನಿಯೋಜಿತ ಕಾರ್ಯದ ವಿವಿಧ ಅಂಶಗಳಿಗೆ ದುರ್ಬಲ, ತೃಪ್ತಿಕರ, ಉತ್ತಮ, ಅತ್ಯುತ್ತಮ ಎಂಬ ನಿರ್ವಹಣೆಯ ವಿವಿಧ ಹಂತಗಳನ್ನು ನೇಮಿಸುವ ಒಂದು ಘಟಕವನ್ನಿಟ್ಟುಕೊಂಡು , ಇದನ್ನೇ ವಿದ್ಯಾರ್ಥಿಗಳು ಸ್ವ/ಸಹಪಾಠಿ ಮೌಲ್ಯಮಾಪನದಲ್ಲಿಯೂ ಬಳಸಬಹುದು. ಶಿಕ್ಷಕರು ವಿಶೇಷಣಗಳನ್ನು ಕೊಟ್ಟ ಕಾರ್ಯದ ಆಧಾರದ ಮೇಲೆ ಬದಲಾಯಿಸಬಹುದು. ಅಂತರ್ಜಾಲ ಆಧಾರಿತ ಪರೀಕ್ಷೆಯಾದ ಟಾಫೆಲ್(TOEFL) ನ ಒಂದು ರೂಬ್ರಿಕ್ಸ್/ ಸೂಚನಾ ಪಟ್ಟಿಯ ಮಾದರಿಯನ್ನು ಇಲ್ಲಿ ಕೊಡಲಾಗಿದೆ:

| ಅಂಕ | ಬರವಣಿಗೆಯ ವಿವರಣೆ |
|---|---|
| 5 | **ಈ ಹಂತದ ಪ್ರಬಂಧವು ಬಹುತೇಕ ಈ ಕೆಳಕಂಡ ಅಂಶಗಳನ್ನು ಒಳಗೊಂಡಿರುತ್ತದೆ**<br>• ಪರಿಣಾಮಕಾರಿಯಾಗಿ ವಿಷಯವನ್ನು ಮತ್ತು ಚಟುವಟಿಕೆಯನ್ನು ಗುರುತಿಸುತ್ತದೆ<br>• ಸುಸಂಘಟಿತವಾಗಿ ಬೆಳವಣಿಗೆ ಹೊಂದಿ, ಸೂಕ್ತ ವಿವರಣೆಯನ್ನು ಒಳಗೊಂಡಿರುತ್ತದೆ, ಉದಾಹರಣೆಗಳು ಮತ್ತು ಇತರ ವಿವರಗಳನ್ನೊಳಗೊಂಡಿರುತ್ತದೆ<br>• ಐಕ್ಯತೆ, ಪ್ರಗತಿ ಮತ್ತು ಸಂಲಗ್ನ ಹೊಂದಿರುತ್ತದೆ<br>• ಅಲ್ಪಮಟ್ಟದ ವ್ಯಾಕರಣ, ಪದ ದೋಷವಿದ್ದರೂ ಭಾಷೆಯ ಬಳಕೆಯಲ್ಲಿ ಸುಸಂಗತ್ಯ, ವೈವಿಧ್ಯಮಯ ವಾಕ್ಯರಚನೆ, ಸೂಕ್ತ ಪದ, ನಾಣ್ಣುಡಿಗಳ ಬಳಕೆಯನ್ನು ಒಳಗೊಂಡಿರುತ್ತದೆ |
| 4 | **ಈ ಹಂತದ ಪ್ರಬಂಧವು ಬಹುತೇಕ ಈ ಕೆಳಕಂಡ ಅಂಶಗಳನ್ನು ಒಳಗೊಂಡಿರುತ್ತದೆ:** |

| | |
|---|---|
| | • ಕೆಲವು ಅಂಶಗಳನ್ನು ಸಂಪೂರ್ಣವಾಗಿ ವಿವರಿಸದಿದ್ದರೂ, ವಿಷಯ ಮತ್ತು ಕೈಗೊಂಡ ಕೆಲಸದ ಬಗ್ಗೆ ಸರಿಯಾಗಿ ಹೇಳುವುದು,<br>• ಅಚ್ಚುಕಟ್ಟಾಗಿ ಸಂಘಟಿಸಿದ್ದು, ಚೆನ್ನಾಗಿ ಬೆಳವಣಿಗೆ ಹೊಂದಿದ್ದು , ಸೂಕ್ತ ಮತ್ತು ಸಾಕಷ್ಟು ವಿವರಣೆ ಬಳಸಿ, ಉದಾಹರಣೆ ಮತ್ತು ಇತರ ವಿವರಗಳನ್ನೊಳಗೊಂಡಿರುತ್ತದೆ.<br>• ಕೆಲವು ಕಡೆ ವಿಷಯಾಂತರವಾಗಿದ್ದು , ಅವಶ್ಯಕತೆಗಿಂತ ಹೆಚ್ಚು ವಿವರಗಳಿದ್ದು, ಅಸ್ಪಷ್ಟತೆಯಿದ್ದರೂ ಐಕ್ಯತೆ, ಪ್ರಗತಿ ಮತ್ತು ಸಂಲಗ್ನ ಹೊಂದಿರುತ್ತದೆ<br>• ಕೆಲವೊಮ್ಮೆ ಸಾಂದರ್ಭಿಕ ವಾಕ್ಯ ದೋಷ, ವ್ಯಾಕರಣ ದೋಷ, ನಾಣ್ಣುಡಿಗಳ ಬಳಕೆಯಲ್ಲಿ ದೋಷವಿದ್ದರೂ ಅರ್ಥಕ್ಕೆ ಚ್ಯುತಿ ಬಾರದಂತೆ ವೈವಿಧ್ಯಮಯ ವಾಕ್ಯರಚನೆ, ವೈವಿಧ್ಯಮಯ ಪದಗಳು, ನಾಣ್ಣುಡಿಗಳ ಬಳಕೆಯನ್ನು ಒಳಗೊಂಡಿರುತ್ತದೆ |
| 3 | **ಈ ಹಂತದ ಪ್ರಬಂಧವು ಒಂದು ಅಥವಾ ಹೆಚ್ಚಿನ ಸಂಖ್ಯೆಯಲ್ಲಿ ಈ ಕೆಳಕಂಡ ಅಂಶಗಳಿಂದ ಗುರುತಿಸಲ್ಪಡುತ್ತದೆ:**<br>• ವಿಷಯ ಹಾಗು ಕೈಗೊಂಡ ಕೆಲಸದ ಬಗ್ಗೆ ಸುಮಾರಾಗಿ ಬೆಳವಣಿಗೆಯಾದ ವಿವರಣೆ , ಉದಾಹರಣೆ ಹಾಗು ಮತ್ತಿತರ ವಿವರಗಳನ್ನೊಳಗೊಂಡಿರುತ್ತದೆ<br>• ಆಲೋಚನೆಗಳನ್ನು ಸಂಘಟಿಸುವಲ್ಲಿ ಕೆಲವೊಂದು ಕಡೆ ದೋಷವಿದ್ದರೂ, ಐಕ್ಯತೆ, ಬೆಳವಣಿಗೆ ಮತ್ತು ಸಂಲಗ್ನ ಹೊಂದಿರುತ್ತದೆ<br>•  ಅಪೂರ್ಣ,ಅಸಮರ್ಪಕ ವಾಕ್ಯ ರಚನೆ, ಪದ ಆಯ್ಕೆಯಿಂದಾಗಿ ವಿಷಯ ಮಂಡನೆಯಲ್ಲಿ ಅಸ್ಪಷ್ಟತೆ ಕಾಣುತ್ತದೆ ಹಾಗು ಕೆಲವೊಮ್ಮೆ ಅರ್ಥ ಕಳೆದುಹೋಗುತ್ತದೆ .<br>• ಸ್ಪಷ್ಟವಾದರೂ ಮಿತಿಯುಳ್ಳ ವಾಕ್ಯ ರಚನೆ, ಪದ ಬಳಕೆ ಕಂಡುಬರುತ್ತದೆ |
| 2 | • **ಈ ಹಂತದ ಪ್ರಬಂಧವು ಒಂದು ಅಥವಾ ಹೆಚ್ಚಿನ ಸಂಖ್ಯೆಯಲ್ಲಿ ಈ ಕೆಳಕಂಡ ದೌರ್ಬಲ್ಯಗಳನ್ನು ತೋರಿಸುತ್ತದೆ:**<br>• ಕೊಟ್ಟ ಕೆಲಸಕ್ಕೆ ಮತ್ತು ವಿಷಯಕ್ಕೆ ಪ್ರತಿಕ್ರಯಿಸುವಲ್ಲಿ ಮಿತಿಯುಳ್ಳ ಬೆಳವಣಿಗೆ ಕಂಡುಬರುತ್ತದೆ<br>• ಆಲೋಚನೆಗಳನ್ನು ಸಂಘಟಿಸುವಲ್ಲಿ ಅಥವಾ ಒಂದಕ್ಕೊಂದು ಸಂಬಂಧ ಕಲ್ಪಿಸುವಲ್ಲಿ ಅಸಮರ್ಪಕತೆಯಿರುತ್ತದೆ<br>• ಕೈಗೊಂಡ ಕೆಲಸಕ್ಕೆ ಪ್ರತಿಕ್ರಿಯೆಯಾಗಿ ವಿಷಯಗಳ ಸಾಮಾನ್ಯೀಕರಣವನ್ನು ಪ್ರತಿಪಾದಿಸುವ ಅಥವಾ ಚಿತ್ರಿಸುವುದಕ್ಕೆ ಅಸೂಕ್ತ ಅಥವಾ ಅಸಮರ್ಪಕ ಉದಾಹರಣೆಗಳು, ವಿವರಣೆಗಳ ಬಳಕೆಯಿರುತ್ತದೆ .<br>• ಎದ್ದುಕಾಣುವಂಥ ಅಸಮರ್ಪಕ ಪದಗಳ ಅಥವಾ ಪದರಚನೆಗಳ ಬಳಕೆ<br>• ವಾಕ್ಯರಚನೆಯಲ್ಲಿ, ಬಳಕೆಯಲ್ಲಿ ದೋಷ ಕಂಡುಬರುತ್ತದೆ |
| 1 | • **ಈ ಹಂತದ ಪ್ರಬಂಧವು ಒಂದು ಅಥವಾ ಹೆಚ್ಚಿನ ಸಂಖ್ಯೆಯಲ್ಲಿ ಈ ಕೆಳಕಂಡ ದೌರ್ಬಲ್ಯಗಳ ಕಾರಣದಿಂದ ಗಂಭೀರವಾಗಿ ದೋಷಪೂರಿತವಾಗಿರುತ್ತದೆ:**<br>• ಬಹಳ ಅಸಂಘಟಿತವಾಗಿರುತ್ತದೆ ಹಾಗು ಅಸಮರ್ಪಕ ಬೆಳವಣಿಗೆಯುಳ್ಳದ್ದಾಗಿರುತ್ತದೆ.<br>• ಕೈಗೊಂಡ ಕೆಲಸಕ್ಕೆ ಸರಿಯಾದ ವಿವರ ಇಲ್ಲದಿರುವುದು, ಅನಗತ್ಯ ವಿಚಾರಗಳ ಬಳಕೆ ಮತ್ತು ಪ್ರಶ್ನಾರ್ಥಕವಾದ ಪ್ರತಿಕ್ರಿಯೆ ನೀಡುವುದು . |

| | |
|---|---|
| | • ವಾಕ್ಯರಚನೆಯಲ್ಲಿ, ಬಳಕೆಯಲ್ಲಿ ಗಂಭೀರ ದೋಷಗಳಿರುವುದು |
| ೦ | **ಈ ಹಂತದ ಪ್ರಬಂಧವು** ವಿಷಯದದಲ್ಲಿರುವ ಪದಗಳನ್ನು ನಕಲು ಮಾಡಿರುತ್ತದೆ. ವಿಷಯವನ್ನೇ ತಿರಸ್ಕರಿಸುತ್ತದೆ ಅಥವಾ ವಿಷಯಕ್ಕೆ ಸಂಬಂಧವೇ ಪಟ್ಟಿರುವುದಿಲ್ಲ, ವಿದೇಶಿ ಭಾಷೆಯಲ್ಲಿ ಬರೆಯಲ್ಪಟ್ಟಿರುತ್ತದೆ, ಅಪರಿಚಿತ ಲಿಪಿಯಲ್ಲಿರುತ್ತದೆ ಅಥವಾ ಖಾಲಿ ಬಿಟ್ಟಿರುತ್ತದೆ. |

ಚಿತ್ರ 4. ಸ್ವತಂತ್ರ ಬರವಣಿಗೆ ಅಧ್ಯಾಯ ಶೀರ್ಷಿಕೆ: ಅಂಕ ಪಟ್ಟಿ. ಅಂಕಗಳ ಮಾನದಂಡ, ಇಟಿಎಸ್, 2008 (https://www.ets.org/Media/Tests/.../Integrated_Writing_Rubrics_2008.pd...)

ಸುಮ್ಮನೆ ದರ್ಜೆ/ಗ್ರೇಡ್ ನೀಡುವ ಬದಲು ಗುಣಾತ್ಮಕ/ವಿವರಣಾತ್ಮಕ ಹಿಮ್ಮಾಹಿತಿಯು ಹೆಚ್ಚು ಕಲಿಸುತ್ತದೆ ಎಂಬುದು ಪ್ರಮಾಣೀಕೃತವಾಗಿದೆ . "ಅದೃಷ್ಟವಶಾತ್, ಮೌಲ್ಯಮಾಪನ ಕ್ಷೇತ್ರವು ಕಠಿಣ ಸಂಕಲನಾತ್ಮಕ ಪರೀಕ್ಷಾ ಪರಿಕರ ಹಾಗು ಪದ್ಧತಿಯಿಂದ, ರಚನಾತ್ಮಕ ಮೌಲ್ಯಮಾಪನಕ್ಕೆ ಒತ್ತು ನೀಡುವ ಅನೌಪಚಾರಿಕ ಮೌಲ್ಯಮಾಪನ ತಂತ್ರಗಳನ್ನೊಳಗೊಂಡ, ಮಾನವೀಯವಾಗಿ ವಿಕಾಸಗೊಂಡ ಬದಲಾವಣೆಗೆ ಸಾಕ್ಷಿಯಾಗಿದೆ." (ಓ ನೀಲ್, 1992, ಪುಟ-14)

**ಉಪಸಂಹಾರ**

ಅಂತಿಮವಾಗಿ ಹೇಳಬೇಕೆಂದರೆ, ಸ್ವ-ಮೌಲ್ಯಮಾಪನವು ಖಂಡಿತವಾಗಿಯೂ ಅನೇಕ ಅನುಕೂಲಗಳನ್ನು ಹೊಂದಿದೆ. ಆದರೆ ಕೆಲವು ವಿಚಾರಗಳ ಬಗ್ಗೆ ಶಿಕ್ಷಕರು ಎಚ್ಚರಿಕೆಯಿಂದಿರುವ ಅವಶ್ಯಕತೆಯಿದೆ. ಗಮನಿಸಬೇಕಾದ ಕೆಲವು ಅಂಶಗಳು:

1. ಕೆಲವು ವಿದ್ಯಾರ್ಥಿಗಳು ಈ ಸ್ವ-ಮೌಲ್ಯಮಾಪನ ಕ್ರಮಕ್ಕೆ ಕೂಡಲೇ ಪ್ರತಿಕ್ರಿಯಿಸಬಹುದು, ಆದರೆ ಕೆಲವು ವಿದ್ಯಾರ್ಥಿಗಳಿಗೆ ಆರಂಭದಲ್ಲಿ ವೈಯಕ್ತಿಕ ಗಮನ ಬೇಕಾಗಬಹುದು, ಅವರಿಗೆ ಇದು ಕಲಿಕೆಗೆ ಸಹಾಯ ಮಾಡುತ್ತದೆ ಎಂಬ ಖಾತ್ರಿ ಬೇಕಾಗುತ್ತದೆ.
2. ಶಿಕ್ಷಕರು ಈ ವಿಧಾನವನ್ನು ಎಲ್ಲಾ ಪ್ರಶ್ನೆಗಳಿಗೂ ಉಪಯೋಗಿಸಲು ಸಾಧ್ಯವಿಲ್ಲ. ಉದಾಹರಣೆಗೆ, ಅನೇಕ ರೀತಿಯ ಪ್ರಶ್ನೆಗಳಿರುತ್ತವೆ, ವಿಶೇಷವಾಗಿ ಸಾಹಿತ್ಯದಲ್ಲಿ, ಅಲ್ಲಿ ಸರಿಯಾದ ಬಹು ಉತ್ತರಗಳಿರಬಹುದು. ಸ್ವ-ಮೌಲ್ಯಮಾಪನವು ಒಂದೇ ಉತ್ತರ ಬಯಸುವ ಸಂದರ್ಭವಾಗಿರುವುದರಿಂದ ಅದು ವಿದ್ಯಾರ್ಥಿಗಳನ್ನು ಮುಕ್ತವಾಗಿ ಆಲೋಚಿಸುವುದನ್ನು ನಿಯಂತ್ರಿಸುವ ಸಾಧ್ಯತೆಯಿರುತ್ತದೆ.
3. ಸ್ವ-ಮೌಲ್ಯಮಾಪನವು ಪರೀಕ್ಷೆಯ ಎಲ್ಲ ಸವಾಲುಗಳಿಗೂ ರಾಮಬಾಣವಲ್ಲ. ಉದಾಹರಣೆಗೆ, ಸ್ವ-ಮೌಲ್ಯಮಾಪನವು, ವಿದ್ಯಾರ್ಥಿಗಳಿಗೆ ವಿವರವಾದ ಹಿಮ್ಮಾಹಿತಿ ನೀಡದೇ ಹೋದಾಗ ಸಂಕಲನಾತ್ಮಕ ಮೌಲ್ಯಮಾಪನ ರಚನೆಯಲ್ಲಿ ಯಾವುದೇ ಬದಲಾವಣೆಗೆ ಪ್ರೇರಿಪಿಸುವುದಿಲ್ಲ.

4. ಯಾವ ತರಗತಿಯಲ್ಲಿ ವಿಶೇಷ ಅಗತ್ಯವಿರುವ ಮಕ್ಕಳಿರುವರೋ ಅಲ್ಲಿ, ಈ ಸ್ವ-ಮೌಲ್ಯಮಾಪನವನ್ನು ಮಕ್ಕಳ ಅವಶ್ಯಕತೆಗೆ ತಕ್ಕಂತೆ ಅಳವಡಿಸಿಕೊಳ್ಳಬೇಕು.
5. ರೂಪಣಾತ್ಮಕ ಹಾಗೂ ಸಂಕಲನಾತ್ಮಕ ಮೌಲ್ಯಮಾಪನಗಳ ಮಿಶ್ರಣಗೊಂಡ ಮೌಲ್ಯಮಾಪನ ಪ್ರಕ್ರಿಯೆಯು ದೃಢ ಮತ್ತು ಪ್ರತಿನಿಧಾತ್ಮಕ ಶೈಕ್ಷಣಿಕ ಪ್ರಗತಿಗೆ ಕೊಡುಗೆ ನೀಡುತ್ತದೆ.

ಒಟ್ಟಾರೆಯಾಗಿ ಹೇಳುವುದಾದರೆ, ಮೌಲ್ಯಮಾಪನವು ಇಡೀ ಬೋಧನಾ-ಕಲಿಕಾ ಪ್ರಕ್ರಿಯೆಯ ಕೇಂದ್ರವಾಗಿದೆ. ಶಿಕ್ಷಕರು ವಿದ್ಯಾರ್ಥಿಗಳಿಗೆ ಸ್ವ-ಮೌಲ್ಯಮಾಪನ ಮಾಡಿಕೊಳ್ಳಲು ಅವಕಾಶ ಕೊಡಬೇಕು. ಈ ಅವಕಾಶಗಳು ಅರ್ಥಗ್ರಹಿಕೆಯೊಂದಿಗೆ ಹಿಮ್ಮಾಹಿತಿ ಸ್ವೀಕರಿಸಲು, ಸ್ವ-ನಿರ್ವಹಣೆ, ಅಭ್ಯಾಸ ಮಾಡಲು, ಪುನರಾವರ್ತಿಸಲು/ಪುನರ್ಪ್ರಯತ್ನಿಸಲು ಕೂಡ ಇರಬೇಕು. ಕಡೆಗೂ, "…. ಮೌಲ್ಯಮಾಪನದ ಅಂತಿಮ ಗುರಿಯೆಂದರೆ… ವಿದ್ಯಾರ್ಥಿ ಪಯಣಕ್ಕೆ ಸಹಾಯ ಮಾಡಲು ಪರೀಕ್ಷಿಸಲು, ಚರ್ಚಿಸಲು ಬೇಕಾದ ಅರಿವು ನೀಡುವುದು …" (ಹುತಾರ್-ಮೇಸಿಯಸ್, 1995, ಪುಟ-10). ಇದನ್ನು ಸುಮನ್ ಒಪ್ಪಿಕೊಳ್ತಾರೆ ಅಂತ ಭಾವಿಸುತ್ತೇನೆ.

***

ಅಡಿಟಿಪ್ಪಣಿಗಳು

[1] ಎನ್ ಸಿ ಇ ಆರ್ ಟಿ ಯು ತನ್ನ ಉದ್ಯೋಗಿಗಳನ್ನು ದೇಶದಾದ್ಯಂತ ಇರುವ ಶಾಲೆಗಳಿಗೆ ಕ್ಷೇತ್ರ ಸಂಶೋಧನೆಗೆ ಕಳುಹಿಸುತ್ತದೆ. ಆ ರೀತಿ ನಾನು ಮೂರು ತಿಂಗಳ ಕಾಲ ವಿವಿಧ ಸರ್ಕಾರಿ ಶಾಲೆಗಳಿಗೆ ಭೇಟಿಕೊಟ್ಟಾಗ ಶಿಕ್ಷಕರೊಡನೆ ನಡೆಸಿದ ಸಂವಾದದಲ್ಲಿ ಕಂಡುಬಂದ ಸಾಮಾನ್ಯ ಪ್ರತಿಕ್ರಿಯೆಯಾಗಿತ್ತು.

[2] ಗೇಮ್ ಥಿಯರಿಯಲ್ಲಿ ಬಳಸುವ ಒಂದು ಪಾರಿಭಾಷಿಕ ಪದ, ಅಲ್ಲಿ ಎಲ್ಲಾ ಫಲಾನುಭವಿಗಳು ಇತರ ಆಟಗಾರರ ನಿರ್ಧಾರವನ್ನು ನಿಯಂತ್ರಿಸುವ ಮಾಹಿತಿ ಬಗ್ಗೆ ತಿಳಿದುಕೊಳ್ಳಲು ಅವಕಾಶವಿರುವುದಿಲ್ಲ.

[3] ಗೇಮ್ ಥಿಯರಿಯಲ್ಲಿ ಬಳಸುವ ಒಂದು ಪಾರಿಭಾಷಿಕ ಪದ, ಅಲ್ಲಿ ಎಲ್ಲಾ ಫಲಾನುಭವಿಗಳು ಇತರ ಆಟಗಾರರ ನಿರ್ಧಾರವನ್ನು ನಿಯಂತ್ರಿಸುವ ಮಾಹಿತಿ ಬಗ್ಗೆ ತಿಳಿದುಕೊಳ್ಳಲು ಅವಕಾಶವಿರುವುದು, ಇದನ್ನು ಸಾಮಾನ್ಯ ಜ್ಞಾನ ಎಂದೂ ಕೂಡ ಕರೆಯಲಾಗುತ್ತದೆ.

**ಪರಾಮರ್ಶನೆ**


Burger, M. (2008). “The alignment of teaching, learning and assessment in English”. In *Home language grade 10 in District 9, Johannesburg* (p. 33) (Dissertation). South Africa: University of South Africa, Pretoria.

Huerta-Macias, A. (1995). Alternative assessment: Responses to commonly asked questions. *TESOL Journal,* 5(1), 10.

O’Neil, J. (1992). Putting performance assessment to the test. *Educational Leadership, 49* (8), 14.

Pierce, L. V. and O’Malley, J. M. (1992). *Performance and portfolio assessment for language minority students.* Washington, DC: National Clearinghouse for Bilingual Education. p. 1-38.

Popham, W. J. (2009). Assessment literacy for teachers: Faddish or fundamental? *Theory into Practice*, *48*, 4–11.

Rea-Dickins, P. and Rixon, S. (1970). The assessment of young learners of English as a foreign language. In C. Clapham and D. Carson (Eds.), *Encyclopedia of language and education, Vol.7: Language testing and assessment* (p. 151). The Netherlands: Kluwer Academic Publishers.

Shaaban, K. (2005). Assessment of young learners. *English Teaching Forum, 43*(1), 1, 34-40.



**ಕೀರ್ತಿ ಕಪೂರ್** ಇವರು ಎನ್ ಸಿ ಆರ್ ಇ ಟಿ ಯಲ್ಲಿ ಕೆಲಸ ಮಾಡುತ್ತಾರೆ. ಇಂಗ್ಲೀಷ್ ಭಾಷೆ ಮತ್ತು ಸಾಹಿತ್ಯ ಬೋಧನೆಯಲ್ಲಿ 25 ವರ್ಷಗಳ ಅನುಭವ ಹೊಂದಿದ್ದಾರೆ.  ಎನ್ ಸಿ ಆರ್ ಇ ಟಿ ಯಲ್ಲಿ ಇವರು ಪಠ್ಯಕ್ರಮ ವಿನ್ಯಾಸ, ಪಠ್ಯಪುಸ್ತಕ ಅಭಿವೃದ್ಧಿ ಪಡಿಸಿದ್ದಾರೆ, ಶಿಕ್ಷಕ ತರಬೇತಿ, ಸಂಶೋಧನೆ ನಡೆಸಿಕೊಟ್ಟಿದ್ದಾರೆ ಮತ್ತು ದೇಶ ವಿದೇಶದ ಸಂಸ್ಥೆಗಳಿಗೆ ಸಲಹೆಗಾರರಾಗಿ ಕಾರ್ಯ ನಿರ್ವಹಿಸಿದ್ದಾರೆ. kkapur07@yahoo.com


**ಚಿಂತನಾತ್ಮಕ ಪ್ರಶ್ನೆಗಳು**

1. ಕಲಿಸಿದ್ದನ್ನು ವಿದ್ಯಾರ್ಥಿಗಳು ಗ್ರಹಿಸಿದರೆ ಇಲ್ಲವೇ ಎಂದು ಪರೀಕ್ಷಿಸಲು ಸಾಂಪ್ರದಾಯಿಕ ಪರೀಕ್ಷೆಗಳಿರುವುದೇ ಸರಿಯೇ ಅಥವಾ ಬೇರೆ ಮಾರ್ಗಗಳೂ ಇರಬೇಕೇ? ಚರ್ಚಿಸಿ.
2. ಸ್ವ-ಮೌಲ್ಯಮಾಪನ ಎಂದರೇನು? ಇದರಿಂದ ವಿದ್ಯಾರ್ಥಿಗಳಿಗೆ ಲಾಭವಾಗುತ್ತದೆಯೇ?
3. ತಮಗೆ ಅನುಕೂಲವಾಗುತ್ತದೆಂದು ಶಿಕ್ಷಕರು ಈ ಸ್ವ-ಮೌಲ್ಯಮಾಪನ ಕ್ರಮವನ್ನೇ ಅವಲಂಬಿಸಿದರೆ? ವಿಚಾರಮಾಡಿ.

4. ಸ್ವ-ಮೌಲ್ಯಮಾಪನದ ಅನುಕೂಲ ಅನಾನುಕೂಲಗಳೇನು?

**ಅನುವಾದ**: ನಾಗಮಣಿ ಎಸ್. ಎನ್/ **ಪರಿಶೀಲನೆ**: ಗುಂಡೂರ್

ಮೂಲ: *Language and Language Teaching* Volume 4 Number 1 Issue 7 January 2015